**2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.713/2023**

| | | |
|---|---|---|
| ಹೆಸರು | ಈರಮ್ಮ | PW -1 |
| ಗಂಡನ ಹೆಸರು | ಬಿ ಎಂ ಸಂಗಯ್ಯ | CW -1 |
| ವಯಸ್ಸು | 50 ವರ್ಷ | |
| ಉದ್ಯೋಗ | ಗೃಹಿಣಿ | ದಿನಾಂಕಃ 23.10.2024 |
| ವಾಸ | ಮಲೆಬೆನ್ನೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 4 ನನ್ನ ಗಂಡ. ಚಾಸಾ 5 ಮತ್ತು 6 ರವರ ಪರಿಚಯ ಇದೆ. ಆರೋಪಿ ನನ್ನ ದೂರದ ಸಂಬಂಧಿ.

ಮಲೆಬೆನ್ನೂರಿನ ಕಲ್ಲೇಶ್ವರ ಬಡಾವಣೆಯಲ್ಲಿ ನಮ್ಮ ಸೈಟ್ ಇದ್ದು, 2021 ರಲ್ಲಿ ಆರೋಪಿತರು ಸದರಿ ಸೈಟ್ ನಲ್ಲಿ ದನ ಕಟ್ಟಲು ಶೆಡ್ ಹಾಕುತ್ತಿದ್ದಾಗ ಅದನ್ನು ಕೇಳಲು ನನ್ನ ಗಂಡ ಚಾಸಾ 4 ರವರ ಹೋದಾಗ ಆರೋಪಿತರೆಲ್ಲರೂ ಸೇರಿ ನನ್ನ ಗಂಡನಿಗೆ ಎದೆಗೆ, ಕುತ್ತಿಗೆ ಹೊಡೆದರು. ನಂತರ ಆರೋಪಿತರೆಲ್ಲರೂ ನನ್ನ ಸೀರೆಯನ್ನು ಎಳೆದಾಡಿದರು. ನನಗೆ ಮತ್ತು ನನ್ನ ಗಂಡನಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿ, ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನ ಗಂಡನನ್ನು ಕರೆದುಕೊಂಡು ಮಲೆಬೆನ್ನೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಮಾರನೇ ದಿನ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇವೆ. ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ಸದರಿ ಗಲಾಟೆಯಲ್ಲಿ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.